# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ :- | ಮಧ್ಯಾಹ್ನ ಉಪಹಾರ ಯೋಜನೆಯಡಿ ಅಡುಗೆ ತಯಾರಿಕಾ ವೆಚ್ಚವನ್ನು ಹೆಚ್ಚಿಸುವ ಹಾಗೂ ಅಡುಗೆ ಸಿಬ್ಬಂದಿ ನೇಮಕ ಮಾಡುವ ಕುರಿತು ಆದೇಶ ಹೊರಡಿಸುವ ಬಗ್ಗೆ. |
| ಓದಲಾಗಿದೆ :- | 1] ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಎಫ್.1-1/2009 Desk (MDM) ದಿನಾಂಕ: 24.11.2009,<br>2] ಸರ್ಕಾರದ ಆದೇಶ ಸಂಖ್ಯೆ: ಇಡಿ 96 ಎಂಎಂಎಸ್ 2009 ದಿನಾಂಕ: 04.03.2010.<br>3] ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಅವರ ಪತ್ರ ಸಂಖ್ಯೆ: ಎಂ6/ಅ.ದಾ/ಅನುದಾನ-01/09-2010 ದಿ: 20.03.2010. |

**ಪ್ರಸ್ತಾವನೆ :**

ಮೇಲೆ (1) ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಂತೆ ಮಧ್ಯಾಹ್ನ ಉಪಹಾರ ಯೋಜನೆಯಡಿ ಅಡುಗೆಯವರ ಸಂಭಾವನೆಯನ್ನು ದಿನಾಂಕ: 01.12.2009 ರಿಂದ ಹಾಗೂ ಅಡುಗೆ ತಯಾರಿಕಾ ವೆಚ್ಚವನ್ನು ದಿನಾಂಕ: 04.03.2010 ರಿಂದ ಜಾರಿಗೆ ಬರುವಂತೆ ಮೇಲೆ ಓದಲಾದ (2)ರ ಆದೇಶದಲ್ಲಿ ಪರಿಷ್ಕರಿಸಿ ಆದೇಶ ಹೊರಡಿಸಲಾಗಿತ್ತು.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಅವರು ಮೇಲಿನ (2)ರ ಆದೇಶದಲ್ಲಿ ಅಡುಗೆ ತಯಾರಿಕಾ ವೆಚ್ಚವನ್ನು ಶೇಕಡ 7.5ರಷ್ಟು ಹೆಚ್ಚಿಸಿ ಪ್ರತಿ ವಿದ್ಯಾರ್ಥಿಗೆ ದಿನ ಒಂದಕ್ಕೆ

1 ರಿಂದ 5ನೇ ತರಗತಿ ಮಕ್ಕಳಿಗೆ ರೂ 2.50 ರಿಂದ ರೂ 2.69

6 ರಿಂದ 8ನೇ ತರಗತಿ ಮಕ್ಕಳಿಗೆ ರೂ 3.75 ರಿಂದ ರೂ 4.03

ಹಾಗೂ 9 ರಿಂದ 10ನೇ ತರಗತಿ ಮಕ್ಕಳಿಗೆ ರೂ 5.15 ರಿಂದ ರೂ 5.43 ಗೆ ಹೆಚ್ಚಿಸಿ

ಆದೇಶಿಸಲು ಹಾಗೂ ಅಡುಗೆ ಸಿಬ್ಬಂದಿಗಳ ನೇಮಕಾತಿಯನ್ನು, ಮಕ್ಕಳ ಸಂಖ್ಯೆಯನ್ನು ಆಧರಿಸಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಎಫ್.1-1/2009 Desk (MDM) ದಿನಾಂಕ: 24.11.2009,ರನ್ವಯ ಬದಲಾವಣೆ ಮಾಡಲು ಮತ್ತು ಹಿರಿಯ ಪ್ರಾಥಮಿಕ ಶಾಲೆಗೆ ಲಗತ್ತಿಸಿದ ಪ್ರೌಢಶಾಲೆಗಳಿಗೂ (Tagged schools) ಸಹ ಅಡುಗೆಯವರನ್ನು ಈ ಕೆಳಕಂಡಂತೆ ನೇಮಕ ಮಾಡುವಂತೆ ಅದೇಶ ಹೊರಡಿಸಲು ಸರ್ಕಾರವನ್ನು ಕೋರಿರುತ್ತಾರೆ.

| ಕ್ರಮ ಸಂಖ್ಯೆ | ಮಕ್ಕಳ ಸಂಖ್ಯೆ | ಕೇಂದ್ರ | ಅಡುಗೆಯವರ ಸಂಖ್ಯೆ |
|---|---|---|---|
| 1 | 1 ರಿಂದ 25ರ ವರೆಗೆ | ಎ | 1 |
| 2 | 26 ರಿಂದ 100ರ ವರೆಗೆ | ಬಿ | 2 |

| | | | |
|---|---|---|---|
| 3 | 101 ರಿಂದ 200ರ ವರೆಗೆ | ಸಿ | 3 |
| 4 | 201 ರಿಂದ 300ರ ವರೆಗೆ | ಡಿ | 4 |
| 5 | 301 ರಿಂದ 500ರ ವರೆಗೆ | ಇ | 5 |
| 6 | 501 ರಿಂದ 800ರ ವರೆಗೆ | ಎಫ್ | 6 |
| 7 | 801 ರಿಂದ 1100ರ ವರೆಗೆ | ಜಿ | 7 |
| 8 | 1101 ರಿಂದ 1400ರ ವರೆಗೆ | ಹೆಚ್ | 8 |
| 9 | 1401 ರಿಂದ 1700ರ ವರೆಗೆ | ಐ | 9 |
| 10 | 1701 ರಿಂದ ಮೇಲ್ಪಟ್ಟು | ಜೆ | 10 |

ಆದ್ದರಿಂದ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ ಇಡಿ 96 ಎಂಎಂಎಸ್ 2009 ಬೆಂಗಳೂರು, ದಿ: 10-11-2010</u>**

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಅವರ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಪರಿಶೀಲಿಸಿ ಅಕ್ಷರ ದಾಸೋಹ ಕಾರ್ಯಕ್ರಮದಡಿಯ ಮಧ್ಯಾಹ್ನ ಬಿಸಿಯೂಟ ಒದಗಿಸುವ ಯೋಜನೆಯಡಿಯಲ್ಲಿ ಈ ಕೆಳಕಂಡಂತೆ ಅಡುಗೆ ತಯಾರಿಕಾ ವೆಚ್ಚವನ್ನು ಪರಿಷ್ಕರಿಸಿ ಪ್ರತಿ ವಿದ್ಯಾರ್ಥಿಗೆ ಒಂದು ದಿವಸಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುವ ಅನುಧಾನದ ಮೇರೆಗೆ ತರಗತಿ 1 ರಿಂದ 5 ರವರೆಗಿನ ಮಕ್ಕಳಿಗೆ ರೂ 2.50 ರಿಂದ ರೂ 2.69, ತರಗತಿ 6 ರಿಂದ 8ನೇ ತರಗತಿ ಮಕ್ಕಳಿಗೆ ರೂ 3.75 ರಿಂದ ರೂ 4.03 ಹಾಗೂ 9 ರಿಂದ 10ನೇ ತರಗತಿ ಮಕ್ಕಳಿಗೆ ರೂ.5.15 ರಿಂದ ರೂ 5.43ರಂತೆ ಅಡುಗೆ ವೆಚ್ಚವನ್ನು ಪರಿಷ್ಕರಿಸಿ ಆದೇಶಿಸಿದೆ ಹಾಗೂ ಅಡುಗೆ ಸಿಬ್ಬಂದಿ ನೇಮಕಾತಿಯನ್ನು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನೇಮಕಾತಿ ಮಾಡಲು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಸಹ ಆದೇಶಿಸಿದೆ.

| ಕ್ರಮ ಸಂಖ್ಯೆ | ಮಕ್ಕಳ ಸಂಖ್ಯೆ | ಕೇಂದ್ರ | ಅಡುಗೆಯವರ ಸಂಖ್ಯೆ |
|---|---|---|---|
| 1 | 1 ರಿಂದ 25ರ ವರೆಗೆ | ಎ | 1 |
| 2 | 26 ರಿಂದ 100ರ ವರೆಗೆ | ಬಿ | 2 |
| 3 | 101 ರಿಂದ 200ರ ವರೆಗೆ | ಸಿ | 3 |
| 4 | 201 ರಿಂದ 300ರ ವರೆಗೆ | ಡಿ | 4 |
| 5 | 301 ರಿಂದ 500ರ ವರೆಗೆ | ಇ | 5 |
| 6 | 501 ರಿಂದ 800ರ ವರೆಗೆ | ಎಫ್ | 6 |
| 7 | 801 ರಿಂದ 1100ರ ವರೆಗೆ | ಜಿ | 7 |
| 8 | 1101 ರಿಂದ 1400ರ ವರೆಗೆ | ಹೆಚ್ | 8 |



10-11-2010

| | | | |
|---|---|---|---|
| 9 | 1401 ರಿಂದ 1700ರ ವರೆಗೆ | ಐ | 9 |
| 10 | 1701 ರಿಂದ ಮೇಲ್ಪಟ್ಟು | ಜೆ | 10 |

ಈ ಆದೇಶವನ್ನು ಶಿಕ್ಷಣ ಇಲಾಖೆಯ ಅಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಶಿಇ 1474ಐಎಫ್(ಬಿ&ಎ) 2010 ದಿನಾಂಕ: 28.07.2010 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ.ಇ.694 ವೆಚ್ಚ8/2010 ದಿನಾಂಕ: 20.10.2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಇದಕ್ಕೆ ಸಂಬಂಧಿತ ವೆಚ್ಚವನ್ನು ಜಿಲ್ಲಾವಲಯ ಆಯವ್ಯಯ ಲೆಕ್ಕ ಶೀರ್ಷಿಕೆ 2202-01-800-1-35 (ಯೋಜನೆ) ಅಡಿಯಲ್ಲಿ ನಿಗಧಿತ ಪಡಿಸಲಾದ ಆಯವ್ಯಯದಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಐ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).
10-11-2010

ಇವರಿಗೆ :

1. ಮಹಾಲೇಖಪಾಲಕರು, ಕರ್ನಾಟಕ (ಆಡಿಟ್ 1 & 2) ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು ಜಿಲ್ಲಾ
4. ಪಂಚಾಯತ್ (ಆಯುಕ್ತರ ಮುಖಾಂತರ)
5. ಸಹ ನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ) ಬೆಂಗಳೂರು.
6. ನಿರ್ದೇಶಕರು, ಖಜಾನಾ ಇಲಾಖೆ, ಬೆಂಗಳೂರು
7. ಖಜಾನಾಧಿಕಾರಿಗಳು ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
8. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್‌ರಸ್ತೆ, ಬೆಂಗಳೂರು.
9. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ ಆರ್ಥಿಕ ಇಲಾಖೆ (ವೆಚ್ಚ8) ಬೆಂಗಳೂರು ವಿಧಾನ ಸೌಧ.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
12. ಕೋ. ಆರ್ಡಿನೇಟರ್, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬೆಂಗಳೂರು.
13. ಸಾಪ್ತಾಹಿಕ ರಾಜ್ಯ ಪತ್ರ/ ಶಾಖಾ ರಕ್ಷಾ ಕಡತ/
14. ಹೆಚ್ಚುವರಿ ಪ್ರತಿಗಳು.